**CC 5125/2023**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಹೊಸಪೇಟೆ.**

**ಸಿಸಿ ನಂಬರ್ 5125/2023**

**ಸಿ ಡಬ್ಲ್ಯೂ: 1**

**ಪಿ ಡಬ್ಲ್ಯೂ: 1**

| | |
|---|---|
| **ಸಾಕ್ಷಿಯ ಹೆಸರು -** | **ಶ್ರೀಮತಿ. ನಾಗರತ್ನಾ** |
| **ಗಂಡನ ಹೆಸರು -** | **ಬಸವರಾಜ** |
| **ವಯಸ್ಸು -** | **39 ವರ್ಷಗಳು** |
| **ಉದ್ಯೋಗ -** | **ಪಿ ಐ, ಲೋಕಾಯುಕ್ತ, ಬೆಂಗಳೂರು** |
| **ವಾಸಸ್ಥಳ -** | **ಬೆಂಗಳೂರು** |

**ಸಾಕ್ಷಿಯನ್ನು ದಿನಾಂಕಃ 21-09-2024 ರಂದು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎ. ಪಿ. ಪಿ. ಅವರಿಂದ**

ನಾನು ಫೆಬ್ರವರಿ **-2023** ರಿಂದ ಜುಲೈ **-2023** ರವರೆಗೆ ಹಂಪಿ ಪ್ರವಾಸಿ ಪೋಲಿಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ **24-06-2023** ರಂದು ಬೆಳಿಗ್ಗೆ **06-30** ಗಂಟೆಗೆ ನಾನು ನನ್ನ ಮನೆಯಲ್ಲಿದ್ದಾಗ ಕಡ್ಡಿರಾಂಪೂರದ ಉದ್ದಾನಪ್ಪನವರ ಜಮೀನಿಗೆ ಹೋಗುವ ರಸ್ತೆಯಲ್ಲಿ ಗೌತಮ, ಮಂಜುನಾಯಕ ಎಂಬ ವ್ಯಕ್ತಿಗಳು ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿದ್ದಾರೆ ಎಂದು ಖಚಿತ ಮಾಹಿತಿ ಬಂದಿತ್ತು. ಸದರಿ ವಿಷಯವನ್ನು ಡಿ ವಾಯ್ ಎಸ್ ಪಿ ರವರಿಗೆ ತಿಳಿಸಿ ಅವರಿಂದ ಅನುಮತಿ ಪಡೆದು ಠಾಣೆಗೆ ಬೆಳಿಗ್ಗೆ **07-00** ಗಂಟೆಗೆ ಬಂದು ದೂರನ್ನು ನೀಡಿರುತ್ತೇನೆ.

ಸದರಿ ದೂರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ದೂರು ನೋಡಿ ಗುರುತಿಸಿದ್ದು, ಅದನ್ನು ನಿಪಿಃ **1** ಎಂದು, ಸಾಕ್ಷಿಯ ಸಹಿಯನ್ನು ನಿಪಿಃ **1** (ಎ) ಎಂದು ಗುರುತಿಸಲಾಯಿತು.

ನಂತರ ಚಾಸಾ - 2, 3 ಮತ್ತು 6 ರವರಿಗೆ ನೋಟಿಸ್ ಕೊಟ್ಟು ಠಾಣೆಗೆ ಕರೆಯಿಸಿಕೊಂಡಿರುತ್ತೇನೆ. ಸದರಿ ಅಧಿಕಾರಿಗಳಿಗೆ ಗಾಂಜಾ ಮಾರಾಟ ಆಗುತ್ತಿರುವ ಬಗ್ಗೆ ಮಾಹಿತಿ ಬಂದಿದ್ದನ್ನು ತಿಳಿಸಿ, ದಾಳಿ ಕಾರ್ಯದಲ್ಲಿ ಸಹರಿಸುವಂತೆ ಕೇಳಿಕೊಂಡಿರುತ್ತೇನೆ. ನಂತರ ಬೆಳಿಗ್ಗೆ 07-30 ಗಂಟೆಗೆ ನಮ್ಮ ಇಲಾಖಾ ಜೀಪ್ ನಲ್ಲಿ ನಾನು, ಚಾಸಾ -2 , 3 ಮತ್ತು 6 ರವರು ಠಾಣೆಯಿಂದ ದಾಳಿ ಮಾಡಲು ಹೊರಟೆವು. ಸಿಬ್ಬಂದಿಗಳಾದ ಚಾಸಾ -7 ರಿಂದ 13 ರವರು ತಮ್ಮ ತಮ್ಮ ದ್ವಿ ಚಕ್ರ ವಾಹನಗಳಲ್ಲಿ ಗುನ್ನಾ ಸ್ಥಳಕ್ಕೆ ಬರುವಂತೆ ತಿಳಿಸಿದ್ದೆ.

ಬೆಳಿಗ್ಗೆ 08-00 ಗಂಟೆಗೆ ಗುನ್ನಾ ಸ್ಥಳದಲ್ಲಿ ಸ್ವಲ್ಪ ದೂರದಲ್ಲಿ ಹರಿಜನ ನಾರಾಯಣಪ್ಪನವರ ಬಾಳೆ ತೋಟದಲ್ಲಿ ಮರೆಮಾಚಿ ನಿಂತು ನೋಡಲಾಗಿ ಕಡ್ಡಿರಾಂಪೂರದ ಗೌತಮ, ಮಂಜುನಾಯಕ ಎಂಬ ವ್ಯಕ್ತಿಗಳು ತಮ್ಮ ಜೇಬಿನಲ್ಲಿ ಇಟ್ಟುಕೊಂಡಿದ್ದ ಹಸಿರು ಬಣ್ಣದ ಗಾಂಜಾದಂತೆ ಕಾಣುವ ವಸ್ತುವನ್ನು ಮಾರಾಟ ಮಾಡುತ್ತಿರುವುದು ಕಂಡು ಬಂದಿತ್ತು. ಸಾಕ್ಷಿ ಮುಂದುವರೆದು, ನಾವು ಠಾಣೆ ಬಿಟ್ಟಾಗ 08-00 ಗಂಟೆ ಆಗಿತ್ತು ಸ್ಥಳಕ್ಕೆ ಹೋದಾಗ 08-30 ಗಂಟೆ ಆಗಿತ್ತು, ದಾಳಿ ಮಾಡಿದಾಗ 08-40 ಗಂಟೆ ಆಗಿತ್ತು ಎಂದು ನುಡಿಯುತ್ತಾರೆ. ಸದರಿ ವ್ಯಕ್ತಿಗಳನ್ನು ಹಿಡಿದು ಹೆಸರು ಮತ್ತು ವಿಳಾಸ ಕೇಳಿದಾಗ ಗೌತಮ ಮತ್ತು ಮಂಜುನಾಯಕ, ಸಾಃ ಕಡ್ಡಿರಾಂಪೂರ ಗ್ರಾಮ ಎಂದು ತಿಳಿಸಿದರು.

ಸದರಿ ವ್ಯಕ್ತಿಗಳ ಅಂಗಶೋಧನೆ ಮಾಡಲು ಒಪ್ಪಿಗೆ ನೀಡುವಂತೆ ನೋಟಿಸ್ ನೀಡಿದಾಗ ಅವರು ಒಪ್ಪಿದ್ದರಿಂದ ಪಂಚರ ಸಮಕ್ಷಮ ಅವರ ಅಂಗಶೋಧನೆಯನ್ನು ಮಾಡಿ ನೋಡಿದಾಗ ಗೌತಮ ಎಂಬ ವ್ಯಕ್ತಿ ತನ್ನ ಜೇಬಿನಲ್ಲಿ ಪ್ಲಾಸ್ಟಿಕ್ ಕವರ್ ನಲ್ಲಿ ಗಾಂಜಾ ಇಟ್ಟುಕೊಂಡಿದ್ದು ಕಂಡು ಬಂದಿತ್ತು ಮತ್ತು ಮಂಜು ನಾಯಕ ಎಂಬ ವ್ಯಕ್ತಿ ತನ್ನ ಜೇಬಿನಲ್ಲಿ ಇನ್ನೊಂದು ಪ್ಲಾಸ್ಟಿಕ್ ಕವರ್ ನಲ್ಲಿ ಗಾಂಜಾ ಇಟ್ಟುಕೊಂಡಿದ್ದು ಕಂಡು ಬಂದಿತ್ತು.

**CC 5125/2023**

**ಸಿ ಡಬ್ಲೂ: 1**

**ಪಿ ಡಬ್ಲೂ: 1**

ಸದರಿ ಗಾಂಜಾವನ್ನು ಚಾಸಾ -16 ರವರು ತಂದಿದ್ದ ತೂಕದ ಯಂತ್ರದಲ್ಲಿ 2- ಪ್ಲಾಸ್ಟಿಕ್ ಕವರ್ ಗಳನ್ನು ಹೊರತುಪಡಿಸಿ ಒಟ್ಟಾಗಿ ತೂಗಿ ನೋಡಿದಾಗ ಅದು 200 ಗ್ರಾಂ. ಇತ್ತು. ಪ್ಲಾಸ್ಟಿಕ್ ಕವರ್ ಗಳೊಂದಿಗೆ ತೂಗಿ ನೋಡಿದಾಗ ಒಟ್ಟಾಗಿ 220 ಗ್ರಾಂ. ಇತ್ತು.

ಸದರಿ ಗಾಂಜಾವನ್ನು ಒಂದು ಪ್ಲಾಸ್ಟಿಕ್ ಕವರ್ ನಲ್ಲಿ ಹಾಕಿ ಬಿಳಿ ಚೀಲದಲ್ಲಿ ಸುತ್ತಿ ಪಂಚರ ಸಮಕ್ಷಮ ಜಪ್ತು ಮಾಡಿರುತ್ತೇನೆ. ಆರೋಪಿತರು ಗಾಂಜಾವನ್ನು ಹೊಸಪೇಟೆಯ ಕೆನಾಲ್ ಹತ್ತಿರ ಯಾರೋ ಒಬ್ಬ ವ್ಯಕ್ತಿ ಮಾರಾಟ ಮಾಡುತ್ತಿದ್ದಾಗ ಖರೀದಿಸಿರುವುದಾಗಿ ತಿಳಿಸಿದರು. ಸದರಿ ವ್ಯಕ್ತಿಯ ಹೆಸರು ತಮಗೆ ಗೊತ್ತಿಲ್ಲ ಎಂದು ತಿಳಿಸಿದರು. ಸ್ಥಳದಲ್ಲಿ ಪಂಚನಾಮೆಯನ್ನು ತಯಾರಿಸಿರುತ್ತೇನೆ. ಸ್ಥಳದಲ್ಲಿ ಪೋಟೋಗಳನ್ನು ತೆಗೆಯಲು ಮತ್ತು ವಿಡಿಯೋವನ್ನು ಮಾಡಲು ಚಾಸಾ -11 ರವರಿಗೆ ತಿಳಿಸಿದ್ದರಿಂದ ಅವರು ಮಾಡಿರುತ್ತಾರೆ. ಸದರಿ ಪಂಚನಾಮೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಪಂಚನಾಮೆ ನೋಡಿ ಗುರುತಿಸಿದ್ದು, ಅದನ್ನು ನಿಪಿ: 2 ಎಂದು, ಸಾಕ್ಷಿಯ ಸಹಿಯನ್ನು ನಿಪಿ: 2 (ಎ) ಎಂದು ಗುರುತಿಸಲಾಯಿತು. ಸಾಕ್ಷಿ ಕಚ್ಚಾ ನಕಾಶೆಯಲ್ಲಿನ ಸಹಿ ನೋಡಿ ಗುರುತಿಸಿದ್ದು, ಅದನ್ನು ನಿಪಿ: 3 ಎಂದು, ಸಾಕ್ಷಿಯ ಸಹಿಯನ್ನು ನಿಪಿ: 3 (ಎ) ಎಂದು ಗುರುತಿಸಲಾಯಿತು. ವಶಪಡಿಸಿಕೊಂಡಿದ್ದ ಆರೋಪಿತರನ್ನು ಕರೆದುಕೊಂಡು, ಮು ಮಾ ವನ್ನು ಮತ್ತು ಪಂಚನಾಮೆಯನ್ನು ತೆಗೆದುಕೊಂಡು ಠಾಣೆಗೆ ಹಿಂತಿರುಗಿ ತನಿಖಾಧಿಕಾರಿಗಳ ವಶಕ್ಕೆ ನೀಡಿರುತ್ತೇನೆ. ಈಗ ನಾನು ನೋಡುತ್ತಿರುವ ಪೋಟೋಗಳು ಪಂಚನಾಮೆ ಕಾಲಕ್ಕೆ ತೆಗೆಯಲಾಗಿತ್ತು. ಸದರಿ 10- ಪೋಟೋಗಳನ್ನು ಗುರುತಿಸುವಿಕೆಗಾಗಿ ಒಟ್ಟಾಗಿ ನಿಪಿ: 4 ಎಂದು ಗುರುತಿಸಲಾಯಿತು.

ನ್ಯಾಯಾಲಯದ ಮುಂದಿರುವ ಆರೋಪಿತರೇ ಆ ದಿನ ನಾವು ದಾಳಿ ಮಾಡಿದಾಗ ನಮಗೆ ಸಿಕ್ಕಿದ್ದ ಆರೋಪಿತರು ಇರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಚೀಲದಲ್ಲಿನ ಗಾಂಜಾ ನೋಡಿ ಗುರುತಿಸಿದ್ದು, ಅದನ್ನು ಒಟ್ಟಾಗಿ ಮು ಮಾ 1 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಟಿ ಆರ್ ಪಿ., ವಕೀಲರಿಂದ**

ಬಾತ್ಮಿದಾರರು ತಿಳಿಸಿದ ಆಧಾರದ ಮೇಲೆ ಆರೋಪಿತರ ಹೆಸರುಗಳು ನನಗೆ ಗೊತ್ತಾಗಿರುತ್ತದೆ ಅಂದರೆ ಸರಿ. ಬಾತ್ಮಿ ಆಧಾರದ ಮೇಲೆಯೇ ಆರೋಪಿತರ ಹೆಸರುಗಳನ್ನು ಬರೆದು ಪ್ರಥಮ ವರ್ತಮಾನ ವರದಿ ತಯಾರಿಸಲಾಗಿದೆ ಅಂದರೆ ಸರಿ. ಆರೋಪಿತರ ತಂದೆಯ ಹೆಸರುಗಳನ್ನು ಮತ್ತು ಅವರ ವಯಸ್ಸುಗಳನ್ನು ಬಾತ್ಮಿದಾರರಿಗೆ ನಾನು ಕೇಳಿರುವುದಿಲ್ಲ. ಪ್ರಥಮ ವರ್ತಮಾನ ವರದಿಯಲ್ಲಿ ಆರೋಪಿತರು ಯಾರು ಎಂದು ಗೊತ್ತಿದ್ದಾಗ ಸಾಧ್ಯವಾದಷ್ಟು ಮಾಹಿತಿಯನ್ನು ಕಲೆ ಹಾಕಿ ಬರೆಯಲಾಗುತ್ತದೆ ಅಂದರೆ ಸರಿ. ಈ ಪ್ರಕರಣದಲ್ಲಿ ಅಷ್ಟೊಂದೂ ಸಮಯ ಇರಲಿಲ್ಲ ಎಂದು ನುಡಿಯುತ್ತಾರೆ. ನನಗೆ ಯಾವುದೇ ಮಾಹಿತಿ ಬಂದಿರಲಿಲ್ಲ ಅಂದರೆ ಸರಿಯಲ್ಲ. ಆರೋಪಿತರ ಬಗ್ಗೆ ಮೊದಲೇ ಗೊತ್ತಿದ್ದರಿಂದ ಸದರಿಯವರ ಹೆಸರುಗಳನ್ನು ಮಾತ್ರ ಬೇಕಂತಲೇ ದೂರಿನಲ್ಲಿ ನಮೂದಿಸಿ ಸುಳ್ಳು ಪ್ರಥಮ ವರ್ತಮಾನ ವರದಿಯನ್ನು ತಯಾರಿಸಲಾಗಿದೆ ಅಂದರೆ ಸರಿಯಲ್ಲ.

ಡಿ ವಾಯ್ ಎಸ್ ಪಿ ರವರು ದಾಳಿ ಮಾಡಲು ಅನುಮತಿ ನೀಡಿದ ಬಗ್ಗೆ ತನಿಖಾಧಿಕಾರಿಗೆ ದಾಖಲೆಯನ್ನು ಒದಗಿಸಿರುತ್ತೇನೆ. ಡಿ ವಾಯ್ ಎಸ್ ಪಿ ರವರು ಅನುಮತಿ ನೀಡಿದಾಗ ಬೆಳಿಗ್ಗೆ **06-45** ರಿಂದ **07-00** ಗಂಟೆ ಆಗಿತ್ತು. ಅನುಮತಿ ಪಡೆದ ನಂತರವೇ ಪ್ರಥಮ ವರ್ತಮಾನ ವರದಿಯನ್ನು ತಯಾರಿಸಲಾಗಿದೆ. ಡಿ ವಾಯ್ ಎಸ್ ಪಿ ರವರು ಯಾವುದೇ ಅನುಮತಿ ನೀಡದ ಕಾರಣವೇ ಅನುಮತಿ ನೀಡಿದ ಬಗ್ಗೆ ದಾಖಲೆಯನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಿಲ್ಲ ಅಂದರೆ ಸರಿಯಲ್ಲ.

**CC 5125/2023**

**ಸಿ ಡಬ್ಲೂ: 1**

**ಪಿ ಡಬ್ಲೂ: 1**

ಚಾಸಾ **-2, 3** ಮತ್ತು **6** ರವರ ಮನೆಗಳು ನಮ್ಮ ಠಾಣೆಯಿಂದ **5-6** ಕಿ ಮೀ ಅಂತರದಲ್ಲಿ ಇರುತ್ತದೆ. ಚಾಸಾ **-2, 3** ಮತ್ತು **6** ರವರಿಗೆ ದೂರವಾಣಿಯ ಮೂಲಕ ಠಾಣೆಗೆ ಬರಲು ತಿಳಿಸಿ, ನೋಟಿಸ್ ನ್ನು ಠಾಣೆಯಲ್ಲಿ ನೀಡಿರುತ್ತೇನೆ. ಆ ರೀತಿ ಅವರುಗಳ ಮೊಬೈಲ್ ಫೋನ್ ಗಳಿಗೆ ಕರೆ ಮಾಡಿ ಕರೆಯಿಸಿದ್ದೆ. ಸದರಿಯವರ ಮೊಬೈಲ್ ನಂಬರ್ ಗಳು ನನಗೆ ನೆನಪಿಲ್ಲ. ಸದರಿಯವರ ನಂಬರ್ ಗಳು ನನ್ನ ಬಳಿ ಮೊದಲಿನಿಂದಲೇ ಇದ್ದವು. ನಾನು ಆ ದಿನ ಚಾಸಾ **-2, 3** ಮತ್ತು **6** ರವರಿಗೆ ಕರೆ ಮಾಡಿಲ್ಲ, ಅವರು ಠಾಣೆಗೆ ಬಂದಿರಲಿಲ್ಲ ಮತ್ತು ನಾನು ಅವರಿಗೆ ನೋಟಿಸ್ ನೀಡಿಲ್ಲ ಅಂದರೆ ಸರಿಯಲ್ಲ. ಚಾಸಾ **-16** ರವರು ಸಹ ಆ ದಿನ ಠಾಣೆಗೆ ಬಂದಿರಲಿಲ್ಲ ಮತ್ತು ಅವರಿಗೆ ನಾನು ಯಾವುದೇ ನೋಟಿಸ್ ನೀಡಿಲ್ಲ ಅಂದರೆ ಸರಿಯಲ್ಲ.

ನಾನು ಆ ದಿನ ಸಾಕ್ಷಿದಾರರನ್ನು ಕರೆದುಕೊಂಡು ಠಾಣೆ ಬಿಟ್ಟಾಗ ಬೆಳಿಗ್ಗೆ **08-00** ಗಂಟೆ ಆಗಿತ್ತು. ಪಂಚರು ನನ್ನ ವಾಹನದಲ್ಲಿಯೇ ಬಂದಿದ್ದರು. ನಾವು ಜೀಪ್ ನಲ್ಲಿ **6** ಜನ ಹೋಗಿದ್ದೇವು. ನಾನು ಉಪಯೋಗಿಸುತ್ತಿದ್ದ ವಾಹನದಲ್ಲಿ **6** ಜನ ಕುಳಿತುಕೊಳ್ಳಲು ಆಗುವುದಿಲ್ಲ ಅಂದರೆ ಸರಿಯಲ್ಲ. ಕೃತ್ಯ ಸ್ಥಳದಿಂದ **300** ಅಡಿ ಅಂತರದಲ್ಲಿ ನಾವು ಜೀಪ್ ನ್ನು ನಿಲ್ಲಿಸಿದ್ದೇವು. ಕೃತ್ಯ ಸ್ಥಳದಿಂದ ಬಾಳೆ ತೋಟ ಸುಮಾರು **50** ಮೀಟರ್ ಇತ್ತು. ನನಗೆ ಈ ಮೊದಲು ಗಾಂಜಾ ಹೇಗೆ ಇರುತ್ತದೆ ಎಂದು ಗೊತ್ತಿರಲಿಲ್ಲ ಅಂದರೆ ಸರಿಯಲ್ಲ. ಪಂಚರ ಸಮಕ್ಷಮ ದಾಳಿ ಮಾಡುವುದಕ್ಕೂ ಮೊದಲು ನನ್ನ, ಅಧಿಕಾರಿಗಳ ಮತ್ತು ಸಿಬ್ಬಂದಿಗಳ ಅಂಗಶೋಧನೆಯನ್ನು ಮಾಡಿಕೊಂಡಿರುತ್ತೇವೆ. ಆ ಬಗ್ಗೆ ಪಂಚನಾಮೆಯಲ್ಲಿ ಬರೆಸಿಲ್ಲ.

ಆರೋಪಿತರಿಗೆ ಅಂಗಶೋಧನೆ ಮಾಡಲು ಒಪ್ಪಿಗೆ ಕೊಡುವಂತೆ ನೋಟಿಸ್ ಕೊಟ್ಟಾಗ ಬೆಳಿಗ್ಗೆ **08-45** ಗಂಟೆ ಆಗಿತ್ತು. ನಾನು ಪಂಚರೊಂದಿಗೆ ಸ್ಥಳಕ್ಕೆ ಹೋಗಿರಲಿಲ್ಲ, ಪಂಚನಾಮೆ ಮಾಡುವುದಕ್ಕೂ ಮೊದಲು ನಮ್ಮ ಅಂಗಶೋಧನೆಯನ್ನು ಮಾಡಿಸಿರಲಿಲ್ಲ ಮತ್ತು ಆರೋಪಿತರಿಗೆ ಯಾವುದೇ ನೋಟಿಸ್ ನ್ನು ನೀಡಿರಲಿಲ್ಲ ಅಂದರೆ ಸರಿಯಲ್ಲ. ಆರೋಪಿತರ ಜೇಬಿನಲ್ಲಿ ಹಣ ಇರಲಿಲ್ಲ. ಆರೋಪಿತರು ಗುನ್ನಾ ಸ್ಥಳದಲ್ಲಿ ಇರಲಿಲ್ಲ, ನಾವುಗಳು ದಾಳಿ ಮಾಡಿಲ್ಲ ಮತ್ತು ಅವರ ತಾಬಾದಿಂದ ಯಾವುದೇ ವಸ್ತುವನ್ನು ಜಪ್ತು ಪಡಿಸಿಕೊಂಡಿಲ್ಲ ಅಂದರೆ ಸರಿಯಲ್ಲ. ಫೋಟೋಗಳನ್ನು ತೆಗೆದ ಸಿಬ್ಬಂದಿಯ ಹೇಳಿಕೆಯನ್ನು ನಾನು ಪಡೆದಿಲ್ಲ. ಜಪ್ತು ಪಡಿಸಿಕೊಂಡಾ ಮು ಮಾ ವನ್ನು ಪ್ಲಾಸ್ಟಿಕ್ ಕವರ್ ನಲ್ಲಿ ಹಾಕಿದ್ದೇವು. ಮು ಮಾ **1** ರಲ್ಲಿ ಆ ರೀತಿ ಪ್ಲಾಸ್ಟಿಕ್ ಕವರ್ ಇಲ್ಲಾ ಅಂದರೆ ಸರಿ. ಸಾಕ್ಷಿ ಮುಂದುವರೆದು, ಇನವೆಂಟರಿ ಮಾಡಿದಾಗ ಬದಲಿಸಿರಬಹುದು ಎಂದು ನುಡಿಯುತ್ತಾರೆ. ಕೃತ್ಯ ಸ್ಥಳದ ಚೆಕ್ ಬಂದಿ ನನಗೆ ಗೊತ್ತು. ನಿಪಿಃ **3** ರ ನಕಾಶೆಯನ್ನು ಸ್ಥಳದಲ್ಲಿ ಮಾಡಿಲ್ಲ ಮತ್ತು ಠಾಣೆಯಲ್ಲಿಯೇ ಕುಳಿತು ತಯಾರಿಸಿರುತ್ತೇನೆ ಅಂದರೆ ಸರಿಯಲ್ಲ. ನಾವು ಆ ದಿನ ಯಾವುದೇ ದಾಳಿ ಮಾಡಿಲ್ಲ ಅಂದರೆ ಸರಿಯಲ್ಲ. ಅಮಾಯಕರ ಹೆಸರುಗಳನ್ನು ದೂರಿನಲ್ಲಿ ನಮೂದಿಸಿ ಠಾಣೆಯಲ್ಲಿಯೇ ಎಲ್ಲಾ ದಾಖಲೆಗಳನ್ನು ಸೃಷ್ಟಿಸಿಕೊಂಡು ರಾಃ ಪ್ರಕರಣವನ್ನು ದಾಖಲಿಸಿರುತ್ತೇನೆ ಅಂದರೆ ಸರಿಯಲ್ಲ. ಮೇಲಾಧಿಕಾರಿಗಳ ಒತ್ತಡಕ್ಕೆ ಮಣಿದುಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಅಂದರೆಸ ರಿಯಲ್ಲ. ಕೃತ್ಯ ಸ್ಥಳದಲ್ಲಿ ಆರೋಪಿತರು ಇರಲಿಲ್ಲ ಅಂದರೆ ಸರಿಯಲ್ಲ. ಚಾಸಾ **-2, 3** ಮತ್ತು **6** ರವರು ಸರ್ಕಾರಿ ನೌಕರರು ಇದ್ದು ಆ ದಿನ ಅವರುಗಳು ನಮ್ಮೊಂದಿಗೆ ದಾಳಿಗೆ ಬಂದಿರಲಿಲ್ಲ ಅಂದರೆ ಸರಿಯಲ್ಲ.

**CC 5125/2023**

**ಸಿ ಡಬ್ಲೂ: 1**

**ಪಿ ಡಬ್ಲೂ: 1**

ಪಂಚನಾಮೆ ಬರೆಯಲಾಗಿತ್ತು ಎನ್ನಲಾದಾಗ ಚಾಸಾ **-2, 3** ಮತ್ತು **6** ರವರು ಕರ್ತವ್ಯದ ಸ್ಥಳದಲ್ಲಿ ಇದ್ದರು ಅಂದರೆ ಸರಿಯಲ್ಲ.

**ಮರು ವಿಚಾರಣೆ- ಇಲ್ಲ.**

**(**ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)**

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.